**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 16/2018**

| | | |
|---|---|---|
| ಹೆಸರು | ಶ್ರೀ ರಮೇಶ | ಫ್ರಾಸಾಃ 2 |
| ತಂದೆ/ಗಂಡನ ಹೆಸರು | ಶ್ರೀ ಕರಿಗೌಡ | ಚಾಸಾಃ 2 |
| ವಯಸ್ಸು | 50 ವರ್ಷ | ಸಾಕ್ಷಿಯನ್ನು ದಿನಾಂಕಃ 21.06.2022 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ವ್ಯವಸಾಯ | |
| ವಾಸ | ಬೇಗೂರು ಗ್ರಾಮ ಗುಂಡ್ಲುಪೇಟೆ ತಾಲ್ಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದು ಮಹಜರ್ ಆಗಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

**ದಿಃ** 06.08.2017 ರಂದು ಭಾನುವಾರ ಬೆ 9.00 ಗಂಟೆ ಸಮಯದಲ್ಲಿ ಆರೋಪಿತರು ಗಲಾಟೆ ಮಾಡಿರುತ್ತಾರೆ. ಆರೋಪಿತರು ಕೆಟ್ಟ ಮಾತುಗಳಿಂದ ಬೈದಿರುತ್ತಾರೆ. ಮಲ್ಲೇಶ ಅ. ಯಲ್ಲೇಶ ಎಂಬುವವರು ನನ್ನ ಪತ್ನಿ ಹೊಟ್ಟೆಗೆ ಒದ್ದಿರುತ್ತಾರೆ. ಸುರೇಶ ಎಂಬುವವರು ನನ್ನ ಪತ್ನಿಯನ್ನು ಎಳೆದುಕೊಂಡು ಬಂದು ನೆಲಕ್ಕೆ ತಳ್ಳಿ ಕತ್ತನ್ನು ಹಿಸುಕಿ ತುಳಿದಿರುತ್ತಾರೆ. ಆರೋಪಿಗಳು ನನ್ನ ಹೆಂಡತಿಯನ್ನು ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ನಮ್ಮ ಪಕ್ಕದ ಮನೆಯವರು ಹೇಮ ಮತ್ತು ಸಿದ್ದರಾಜು ಎಂಬುವವರು ಬಂದು ಗಲಾಟೆ ಬಿಡಿಸಿ ನನ್ನ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ08.08.2017 ರಂದು ನನ್ನ ಮತ್ತು ಇತರ ಸಾಕ್ಷಿದಾರರ ಸಮಕ್ಷಮ ಗಲಾಟೆ ನಡೆದ ಸ್ಥಳದಲ್ಲಿ ಪೊಲೀಸರು ಮಹಜರ್ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಜಿ.ಜಿ ವಕೀಲರಿಂದ:**

ಚಾಸಾ3 ನನ್ನ ಮಗಳು. ಚಾಸಾ4 ರಿಂದ 6 ರವರು ನಮಗೆ ಪರಿಚಯಸ್ಥರು ಎಂದರೆ ಸರಿ. ಆರೋಪಿಗಳು ಮತ್ತು ನನ್ನ ನಡುವೆ ಸಿವಿಲ್ ದಾವೆ ಇರುತ್ತದೆ ಎಂದರೆ ಸರಿ. ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಆರೋಪಿಗಳು ಜಮೀನಿಗೆ ಸಂಬಂಧಪಟ್ಟಂತೆ ಸಿವಿಲ್ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಆರೋಪಿಗಳು ನಮ್ಮ ದಾಯಾದಿಗಳು. ಆರೋಪಿಗಳಿಗೂ ಮತ್ತು ನನ್ನ ಹೆಂಡತಿಗೂ ದಿಃ06.08.2017 ರಂದು ಗಲಾಟೆ ನಡೆದಿರುತ್ತದೆ. ಘಟನೆ ನಡೆದಾಗ ಎಲ್ಲಾ ಆರೋಪಿತರು ಬಂದಿದ್ದರು. ಗಲಾಟೆಯಾದಾಗ ನನ್ನ ಹೆಂಡತಿ ಮನೆಯೊಳಗೆ ಇದ್ದರು. ನಮ್ಮದು ತೊಟ್ಟಿ ಮನೆ. ನಮ್ಮ ಅಕ್ಕಪಕ್ಕದಲ್ಲಿ ಹಲವಾರು ಮನೆಗಳಿಗೆ ಎಂದರೆ ಸರಿ. ಗಲಾಟೆಯಾದಾಗ ಅಕ್ಕಪಕ್ಕದರವರು ಯಾರು ಬಂದಿರುವುದಿಲ್ಲ ಮತ್ತು ಹಾಜರಿರುವುದಿಲ್ಲ. ಆರೋಪಿತರು ಸಹ ನಮ್ಮ ವಿರುದ್ಧ ಪಿರ್ಯಾದನ್ನು ನೀಡಿರುತ್ತಾರೆ ಎಂದರೆ ಸರಿ.

ಆಸ್ಪತ್ರೆಗೆ ನಾನು, ನನ್ನ ಹೆಂಡತಿ, ನನ್ನ ಮಗಳು ಹೋಗಿರುತ್ತೇವೆ. ಆಗ ನನ್ನ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರಿಗೆ ಪ್ರಜ್ಞೆ ಇರಲಿಲ್ಲ. ನನ್ನ ಹೆಂಡತಿಗೆ ಜಗದೀಶ್ ಡಾಕ್ಟರ್ ಚಿಕಿತ್ಸೆ ನೀಡಿರುತ್ತಾರೆ. ಆಸ್ಪತ್ರೆಯಲ್ಲಿ ನನ್ನ ಮಗಳು, ನನ್ನ ಹೆಂಡತಿ ವಿಚಾರವನ್ನು ವೈದ್ಯರಿಗೆ ತಿಳಿಸಿರುತ್ತಾರೆ. ಆಸ್ಪತ್ರೆಗೆ ನನ್ನ ಹೆಂಡತಿಯನ್ನು ಎಷ್ಟು ಗಂಟೆಗೆ ಕರೆದುಕೊಂಡು ಹೋದೆ ನನಗೆ ಗೊತ್ತಿಲ್ಲ. ಪಿರ್ಯಾದನ್ನು ನನ್ನ ಹೆಂಡತಿ ಬರೆದುಕೊಟ್ಟಿರುತ್ತಾರೆ ನಾನು ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ. ಪಿರ್ಯಾದನ್ನು ಘಟನೆ ನಡೆದ ಮರು

ದಿನ ಕೊಟ್ಟಿರುತ್ತೇನೆ. ಪಿರ್ಯಾದಿನಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಪಿರ್ಯಾದು ಕೊಟ್ಟ 3 ದಿನಗಳ ನಂತರ ಪೊಲೀಸರು ವಿಚಾರಣೆ ಮಾಡಲು ಬಂದಿರುತ್ತಾರೆ. ಪೊಲೀಸರು ಬಂದಾಗ ಸುಮಾರು 10 ರಿಂದ 11 ಗಂಟೆ ಆಗಿರುತ್ತದೆ. ಪೊಲೀಸರು ಇಬ್ಬರು ಬಂದಿದ್ದರು.

ಮಹಜರ್ ನ್ನು ಪೊಲೀಸರೇ ಬರೆದಿರುತ್ತಾರೆ. ಪೊಲೀಸ್ ಠಾಣೆಗೆ ಪಿರ್ಯಾದು ನೀಡಿದ ಒಂದು ವಾರದ ನಂತರ ಸಹಿಯನ್ನು ಹಾಕಲು ಹೋಗಿದ್ದೆ. ಮಹಜರ್ ಕ್ರಮ ಜರುಗಿಸುವಾಗ ಶೇಖರ್ ಮತ್ತು ಸಿದ್ದರಾಜು ರವರು ಇದ್ದರು. ಶೇಖರ್ ಮತ್ತು ಸಿದ್ದರಾಜು ರವರು ಎಲ್ಲಿ ಸಹಿ ಮಾಡಿದರು ಗೊತ್ತಿಲ್ಲ. ಆರೋಪಿಗಳಿಗೂ ನಮಗೂ ಸಿವಿಲ್ ದಾವೆ ಇರುವುದರಿಂದ ಆರೋಪಿತರ ವಿರುದ್ಧ ಸುಳ್ಳು ಪಿರ್ಯಾದನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನಹೆಂಡತಿ ನೀಡಿರುವ ಪಿರ್ಯಾದಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 16/2018**

| | | |
|---|---|---|
| ಹೆಸರು | ಶ್ರೀಮತಿ ಮಲ್ಲಿಗಮ್ಮ | ಫ್ರಾಸಾಃ 1 |
| ತಂದೆ/ಗಂಡನ ಹೆಸರು | ಶ್ರೀ ರಮೇಶ | ಚಾಸಾಃ 1 |
| ವಯಸ್ಸು | 40 ವರ್ಷ | ಸಾಕ್ಷಿಯನ್ನು ದಿನಾಂಕಃ 21.06.2022 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಗೃಹಿಣಿ | |
| ವಾಸ | ಬೇಗೂರು ಗ್ರಾಮ ಗುಂಡ್ಲುಪೇಟೆ ತಾಲ್ಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

**ದಿಃ** 06.08.2017 ರಂದು ಭಾನುವಾರ ಬೆ 9.00 ಗಂಟೆ ಸಮಯದಲ್ಲಿ ಇಂದ್ರ ರವರು ಬಲಗೈನಿಂದ ನನ್ನ ಕೆನ್ನೆಗೆ ಹೊಡೆದಿರುತ್ತಾರೆ. ಮಲ್ಲೇಶ ಅ. ಯಲ್ಲೇಶ ಎಂಬುವವರು ನನ್ನ ಹೊಟ್ಟೆಗೆ ಒದ್ದಿರುತ್ತಾರೆ. ಸುರೇಶ ಎಂಬುವವರು ನನ್ನನ್ನು ಎಳೆದುಕೊಂಡು ಬಂದು ನೆಲಕ್ಕೆ ತಳ್ಳಿ ಕತ್ತನ್ನು ಹಿಸುಕಿ ತುಳಿದಿರುತ್ತಾರೆ. ಬೇಗೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲು ಆಗುವುದಿಲ್ಲ ಎಂಬ ಕಾರಣದಿಂದ ನನ್ನನ್ನು ಗುಂಡ್ಲುಪೇಟೆ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಘಟನೆ ನಡೆದ ಮರು ದಿನದಂದು ಆಸ್ಪತ್ರೆಯಲ್ಲಿ ನಾನು ಪೊಲೀಸರಿಗೆ ಪಿರ್ಯಾದನ್ನು ನೀಡಿರುತ್ತೇನೆ.

ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ಆರೋಪಿಗಳು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು ಮತ್ತು 2 ನೇ ಆರೋಪಿಯು ಮುಗಿಸಿ ಬಿಡಬೇಕು ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಜಿ.ಜಿ ವಕೀಲರಿಂದ:**

ಚಾಸಾ2 ನನ್ನ ಗಂಡ. ಚಾಸಾ3 ನನ್ನ ಮಗಳು. ಚಾಸಾ4 ರಿಂದ 6 ರವರು ನಮಗೆ ಪರಿಚಯಸ್ಥರು. ಘಟನೆಯು ಭಾನುವಾರದಂದು ನಡೆದಿರುತ್ತದೆ. ಆರೋಪಿಗಳು ಮತ್ತು ನನ್ನ ನಡುವೆ ಸಿವಿಲ್ ದಾವೆ ಇರುತ್ತದೆ ಎಂದರೆ ಸರಿ. ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಪಿರ್ಯಾದನ್ನು ಆಸ್ಪತ್ರೆಯಲ್ಲಿ ಬರೆದಿರುತ್ತಾರೆ ಯಾರು ಬೆರದಿರುತ್ತಾರೆ ಗೊತ್ತಿಲ್ಲ. ಪಿರ್ಯಾದನ್ನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಬರೆದಿರುತ್ತಾರೆ. ಯಾವ ದಿನಾಂಕದಂದು ಪಿರ್ಯಾದನ್ನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದನ್ನು ನೀಡಿರುವುದಿಲ್ಲ, ಕಾರಣ ನನಗ ಪ್ರಜ್ಞೆ ಇರಲಿಲ್ಲ. ಪಿರ್ಯಾದನ್ನು ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿಗೆ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಸುಮಾರು 13-14 ದಿನ ಇದ್ದೆ. ಘಟನೆ ನಡೆದಾಗ ನನ್ನ ಗಂಡ, ನನ್ನ ಮಕ್ಕಳು ನಾನು ಒಟ್ಟು 4 ಜನ ಇದ್ದೆವು. ಘಟನೆ ನಡೆದಾಗ ನಾನು ಮನೆಯ ಒಳಗೆ ಇದ್ದೆ.

ಆರೋಪಿಗಳು ನನ್ನ ಹತ್ತಿರ ಗಲಾಟೆ ಮಾಡಿರುತ್ತಾರೆ. ನನ್ನನ್ನು ಹಿಡಿದು ಎಳೆದುಕೊಂಡು ಹೋಗಿರುತ್ತಾರೆ. ಗಲಾಟೆಯಾದಾಗ ಅಕ್ಕಪಕ್ಕದವರು ಯಾರು ಬಂದಿರಲಿಲ್ಲ ಮತ್ತು ಯಾರು ಹಾಜರಿರಲಿಲ್ಲ. ಆರೋಪಿಗಳು ನನ್ನ ಮತ್ತು ನನ್ನ ಗಂಡನ ವಿರುದ್ಧ ಪಿರ್ಯಾದನ್ನು ನೀಡಿರತ್ತಾರೆ ಎಂದರೆ ಸರಿ. ಆರೋಪಿಗಳು ಮತ್ತು ನಮ್ಮ ನಡುವೆ ಸಿವಿಲ್ ದಾವೆ ಇರುವುದರಿಂದ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ 13 ದಿನ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪೊಲೀಸರು ದಿಃ06.08.2017 ರಂದು ಬಂದು ವಿಚಾರಣೆ ಮಾಡಿದಾಗ ನನಗೆ ಮಾತನಾಡಲು ಆಗದೇ ಇದ್ದ ಕಾರಣ ನಾನು ಪೊಲೀಸರಿಗೆ ಯಾವುದೇ ವಿಚಾರವನ್ನು ತಿಳಿಸಿರುವುದಿಲ್ಲ. ನನಗೆ ಜಗದೀಶ್ ವೈದ್ಯರು ಚಿಕಿತ್ಸೆಯನ್ನು ನೀಡಿರುತ್ತಾರೆ. ನನಗೆ

ಪ್ರಜ್ಞೆ ಇಲ್ಲದ ಕಾರಣ ನನ್ನ ವಿಚಾರವನ್ನು ನನ್ನ ಗಂಡನೇ ವೈದ್ಯರಿಗೆ ತಿಳಿಸಿರುತ್ತಾರೆ. ಆಸ್ಪತ್ರೆಗೆ ಎಷ್ಟು ಸಮಯಕ್ಕೆ ಹೋದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಆಸ್ಪತ್ರೆಗೆ ನನ್ನ ಮಕ್ಕಳು ಮತ್ತು ನನ್ನ ಗಂಡ ಕರೆದುಕೊಂಡು ಹೋಗಿರುತ್ತಾರೆ.

ಆರೋಪಿತರು ನನಗೆ ಯಾವುದೇ ತೊಂದರೆ ನೀಡಿಲ್ಲ, ನನ್ನ ಜೊತೆ ಯಾವುದೇ ಗಲಾಟೆ ಮಾಡಿಲ್ಲ ನಾನು ಸುಳ್ಳು ಪಿರ್ಯಾದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮನೆಯ ಒಳಗೆ ಬಂದು ಗಲಾಟೆ ಮಾಡಿರತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ನೀಡಿರುವ ಪಿರ್ಯಾದಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ